ಆ) ಬಂಕಾಪುರಕ್ಕೆ ಆಚರಣೆಯಾಗುವ ಯಾವುದೇ ಸಾರಿಗೆಗಳನ್ನು ರದ್ದುಪಡಿಸಿರುವುದಿಲ್ಲ. ಸವಣೂರಿನಿಂದ ಕಡಕೋಳ ಮತ್ತು ಕಲಿವಾಳ ಮಾರ್ಗವಾಗಿ ಇಚ್ಛಂಗಿಗೆ ಆಚರಣೆಯಾಗುತ್ತಿದ್ದ ಒಂದು ಸರತಿಯನ್ನು ರದ್ದುಪಡಿಸಲಾಗಿದೆ. ಸವಣೂರು–ಕಳಸೂರು ಸಾರಿಗೆಯು ಆಚರಣೆಯಲ್ಲಿರುತ್ತದೆ. ಉಳಿದ ಮಾರ್ಗಗಳಲ್ಲಿ ಸಾರಿಗೆಗಳು ಆಚರಣೆಯಲ್ಲಿವೆ.

ಇ) 10:30 ಗಂಟೆಯ ಸವಣೂರು–ಇಚ್ಛಂಗಿ ಅಂಚೆ ಸೇವೆಯನ್ನು ದಿನಾಂಕ: 1-8-1996 ರಿಂದ ಪುನರಾಂಭಿಸಲಾಗುತ್ತಿದೆ. ಅಗತ್ಯಕ್ಕನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಪ್ರಾರಂಭಿಸಲಾಗುವುದು.

ವಿಷಯ:- ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಕುರಿತು.

1134 (1766) **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಾದ್ಯಂತ ಎಷ್ಟು ಸಾವಿರ ಜನ ಬಗರ್ ಹುಕುಂ ಸಾಗುವಳಿದಾರರಿದ್ದಾರೆ?

ಆ) ಎಷ್ಟು ಜನ ಬಗರ್ ಹುಕುಂ ಸಾಗುವಳಿದಾರರು ಭೂಮಿಯನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿರುತ್ತಾರೆ?

ಇ) ಅವುಗಳಲ್ಲಿ ವಿಲೇವಾರಿಯಾದ ಅರ್ಜಿಗಳೆಷ್ಟು?

ಈ) ಭೂಮಿ ಸಕ್ರಮಗೊಳಿಸಲು ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) & ಆ) ಒಟ್ಟು 10,86,826 ಅರ್ಜಿಗಳು ಬಂದಿರುತ್ತದೆ.

ಇ) ಒಟ್ಟು 6,25,425

ಈ) ಇಲ್ಲ.

ವಿಷಯ:- ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಪದವಿ ವ್ಯಾಸಂಗ ಕುರಿತು.

1135 (2173) **ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ):-** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಪದವಿಯ ವ್ಯಾಸಂಗವು ಯಾವಾಗ ಪ್ರಾರಂಭವಾಯಿತು?

ಆ) ಈ ಪದವಿಯಲ್ಲಿ ಎಷ್ಟು ಜನ ಪದವಿ ಪಡೆದಿದ್ದಾರೆ?

ಇ) ಸದರೀ ಪದವೀಧರರನ್ನು ನಿಯೋಜಿಸಿಕೊಳ್ಳಲು ಸರ್ಕಾರವು ನೀತಿ ನಿಯಮಗಳೇನಾದರೂ ರೂಪಿಸಿದೆಯೆ?